**ಚಾಸಾ-6 ಪ್ರಾಸಾ-4**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ. 13735/2019**

| | |
|---|---|
| **ಸಾಕ್ಷಿದಾರರ ಹೆಸರು** | ಸರ್ವಮಂಗಳ, |
| **ಡನ ಹೆಸರು** | ಲೇಟ್. ಅಶ್ವಥ್ ನಾರಾಯಣ, |
| **ವಯಸ್ಸು** | 60 ವರ್ಷ |
| **ಉದ್ಯೋಗ** | ಗೃಹಿಣಿ, |
| **ವಾಸ** | ಜಯನಗರ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 12.05.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಚಾಸಾ-1 ರಿಂದ 5 ರವರು ಗೊತ್ತು. 1988 ರಲ್ಲಿ ಗ್ಯಾಬ್ರೀಲ್ ಎನ್ನುವವರಿಂದ ನನ್ನ ತಂದೆ ಸೈಟ್ ನಂ.32 ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ನನ್ನ ಅಣ್ಣಂದಿರುವ ಮತ್ತು ನನ್ನ ತಂಗಿ ನನ್ನ ಹೆಸರಿಗೆ 2013 ರಲ್ಲಿ ಸೈಟ್ ನಂ.32 ನ್ನು ನೊಂದಾಯಿಸಿರುತ್ತಾರೆ. ನನ್ನ ಸೈಟ್ ನ ಪಕ್ಕದಲ್ಲಿ ಚಾಸಾ-1 ರವರು ಸೈಟ್ ನಂ.31 ನ್ನು ಖರೀದಿ ಮಾಡಿದ್ದರು. ಸೈಟ್ ನಂ.31 ರಲ್ಲಿ ಚಾಸಾ-1 ರವರು ಚಿಕ್ಕದಾಗಿ ಒಂದು ಶೆಡ್ ನ್ನು ಕಟ್ಟಿದರು. ಈಗಿರುವಾಗ ಮಾದೀಪ್ , ಶ್ರೀನಿವಾಸ್ ಮತ್ತು ಆರೋಪಿತರು ಸೈಟ್ ನಂ.31,32 ಮತ್ತು 33 ಗಳಿಗೆ ಅತಿಕ್ರಮವಾಗಿ ಪ್ರವೇಶ ಮಾಡಿ ಒಂದು ಬ್ಯಾನರ್ ನ್ನು ಅಳವಡಿಸಿದ್ದರು. ಇದರ ಬಗ್ಗೆ ವಿಚಾರಿಸಿದಾಗ ಆರೋಪಿತರು, ಮಾದೀಪ್ ಮತ್ತು ಶ್ರೀನಿವಾಸ್ ರವರು ಈ ಸೈಟ್ ಗಳಿಗೆ ನೀವು ಕಾಲಿಟ್ಟರೇ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಘಟನೆಯ ಬಗ್ಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ.ಪಿಆರ್ ಆರೋಪಿತರ ಪರ ವಕೀಲರಿಂದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ರೂ.300/- ಖರ್ಚಿನ ಸಹಿತ ಪಾಟೀಸವಾಲಿಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

ಚಾಸಾ-6 ಪ್ರಾಸಾ-4